**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 21-01-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರವರಿಂದಃ

ನಾನು ಎಂ ಎ ಪಧವೀಧರನಾಗಿದ್ದೇನೆ. 2020 ರ ಮೇ ಯಿಂದ ಆರೋಪಿಯ ಪರಿಚಯ ಇದೆ. ಆರೋಪಿಯು ನನ್ನ ಮದುವೆಯಲ್ಲಿ ಪರಿಚಯ ಆಗಿದ್ದು ಆಗ ನಾನು ಗೌರಿಬಿದನೂರಿನಲ್ಲಿ ವಾಸ ಮಾಡುತ್ತಿದ್ದೆ . ನಾನು ಗೌರಿಬಿದನೂರಿನ ಅರುಣ ಆಸ್ಪತ್ರೆ ಹಿಂಭಾಗದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೆ. ಸದರಿ ಬಾಡಿಗೆ ಮನೆಯನ್ನು ನನ್ನ ಅತ್ತೆ ಹೆಸರಿನಲ್ಲಿ ಮಾಡಲಾಗಿತ್ತು. ಆರೋಪಿಯು ಸದರಿ ವೇಳೆಯಲ್ಲಿ ಚಿಕ್ಕಬಳ್ಳಾಪುರದಲ್ಲಿ ವಾಸಿಸುತ್ತಿದ್ದರು. ಆರೋಪಿಗೆ ಎಷ್ಟು ಸಂಬಂಳ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಯಾವ ದಿನಾಂಕದಂದು ಸಾಲ ಕೇಳಿದ್ದಾರೆ ಎಂದು ದಿನಾಂಕ ನೆನಪಿಲ್ಲ. ಸಾಕ್ಷಿಯು ಮುಂದುವರೆದು ನಾನು ಹಣ ನೀಡಿದ 2-3 ತಿಂಗಳ ಹಿಂದೆ ಕೇಳಿದ್ದರು ಎನ್ನುತ್ತಾರೆ. ಆರೋಪಿಯು ನಮ್ಮ ಮನೆಗೆ ಬಂದು ಸಾಲ ಕೇಳಿದ್ದರು. ಸದರಿಯವರು ಸಾಲ ಕೇಳಿದಾಗ ನಾನು ಮತ್ತು ನನ್ನ ಹೆಂಡತಿ ಇದ್ದೇವೆ . ಆಗ ಸುಮಾರು ರಾತ್ರಿ 8 ಗಂಟೆಯಾಗಿತ್ತು. ಅದೇ ದಿನ ಸದರಿಯವರಿಗೆ ಹಣ ನೀಡಿಲ್ಲ. ಸಾಕ್ಷಿಯು ಮುಂದುವರೆದು ಕಾಲಾವಕಾಶ ಪಡೆದಿದ್ದೆ ಎನ್ನುತ್ತಾರೆ. ನಾನು ಆರೋಪಿಗೆ ನಗದು ರೂಪದಲ್ಲಿ ಹಣ ನೀಡಿದ್ದು ಡ್ರಾ ಮಾಡಿಲ್ಲ. ಸದರಿ 6 ಲಕ್ಷ ನಗದು ರೂಪದಲ್ಲಿಯೇ ಮನೆಯಲ್ಲಿ ಇತ್ತು . ಸದರಿ ಹಣವನ್ನು ನಮ್ಮ ಊರಾದ ಹೆಮ್ಮನಹಳ್ಳಿ ಗ್ರಾಮದ ಮನೆಯಲ್ಲಿ ಬಂದು ಪಡೆದುಕೊಂಡಿದ್ದಾರೆ . ಆರೋಪಿಯು ಸಾಲ ಪಡೆದಾಗ ನಾನು ಮತ್ತು ನನ್ನ ಹೆಂಡತಿ ಇದ್ದೆವು . ಆರೋಪಿಯಾಂದಿಗೆ ಪುರುಷರು ಒಬ್ಬರು ಬಂದಿದ್ದರು ಅವರು ನನಗೆ ಗೊತ್ತಿಲ್ಲ. ಸದರಿ ವೇಳೆಯಲ್ಲಿ ಬೆಳಗ್ಗೆ 10 ರಿಂದ 10-30 ಆಗಿತ್ತು . ನಾನು 500 ಮುಖಬೆಲೆಯ ನೋಟುಗಳನ್ನು ನೀಡಿದ್ದೇನೆ. ಸದರಿ ಹಣದ ಭದ್ರತೆಗಾಗಿ ಯಾವುದೇ ದಾಖಲಾತಿ ಪಡೆದುಕೊಂಡಿಲ್ಲ ಸಾಕ್ಷಿಯು ಮುಂದುವರೆದು 4 ತಿಂಗಳಲ್ಲಿ ವಾಪಸ್ಸು ಮಾಡುವುದಾಗಿ ಹೇಳಿದ್ದರು ಎನ್ನುತ್ತಾರೆ. ನಾನು ಭದ್ರತೆಗಾಗಿ ಏನಾದರೂ ನೀಡುವಂತೆ ಒತ್ತಡ ನೀಡಿಲ್ಲ. ನಾನು ವ್ಯಾಪಾರ ಮತ್ತು ವ್ಯವಸಾಯ ಮಾಡುತ್ತೇನೆ. ನಾನು ಹೋಟೇಲ ನಡೆಸುತ್ತೇನೆ. ಸದರಿ ಹೋಟೆಲ ಗೌರಿಬಿದನೂರಿನಲ್ಲಿ ಇದೆ. ಅದರ ಹೆಸರು ಗುರು ರಾಘವೆಂದ್ರ ಮನೆ ರುಚಿ ಹೋಟೆಲ್ . ಸದರಿಯು ನನ್ನ ಅತ್ತೆ ಹೆಸರಿನಲ್ಲಿ ಇದೆ. ಸದರಿ ಹೋಟೇಲ್ 2022 ರಲ್ಲಿ ದಾಖಲಾಗಿದೆ. ಸದರಿ ಲೈಸನ್ಸ ನನ್ನ ಅತ್ತೆ ಹೆಸರಿನಲ್ಲಿ ಇದ್ದು ಹಾಜರು ಪಡಿಸುತ್ತೇನೆ.

ಜಮೀನು ಹೆಮ್ಮನಹಳ್ಳಿ ಗ್ರಾಮದಲ್ಲಿ ಇದೆ. ಸದರಿ ಜಮೀನು ನನ್ನ ಚಿಕ್ಕಪ್ಪನ ಹೆಸರಿನಲ್ಲಿದ್ದು ವ್ಯವಸಾಯ ನಾನು ಮಾಡುತ್ತೇನೆ. ಸದರಿ ಜಮೀನು ಒಟ್ಟು ಕುಟುಂಬದಲ್ಲಿ ಇದ್ದು ನನಗೂ ಭಾಗ ಬರಬೇಕು. ಸದರಿ 1 ಎಕರೆ 5 ಗುಂಟೆ ಇದೆ. ಸದರಿ ಜಮೀನಿನ ಆರ್ ಟಿ ಸಿ ಹಾಜರು ಪಡಿಸಲು ತೊಂದರೆ ಇಲ್ಲ. ವಾರ್ಷಿಕವಾಗಿ ಸದರಿ ವ್ಯವಹಾರಗಳಿಂದ 2 ಲಕ್ಷ ಆದಾಯ ಇರಬಹುದೇ ಎಂದು ಪ್ರಶ್ನಿಸಿದರೇ ಸಾಕ್ಷಿಯು 6 -7 ಲಕ್ಷ ಆದಾಯ ಇದೆ ಎನ್ನುತ್ತಾರೆ.

ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಮ್ಮ ಮನೆಯಲ್ಲಿ ನಾನು , ನನ್ನ ಹೆಂಡತಿ ಮತ್ತು ಅತ್ತೆ ಇದ್ದೇವೆ. ಹೆಮ್ಮನಹಳ್ಳಿ ಗ್ರಾಮದಲ್ಲಿ ಪಡಿತರ ಚೀಟಿ ಹೊಂದಿದ್ದೇವೆ . ಸದರಿಯು ಬಿ ಪಿ ಎಲ್ ಕಾರ್ಡ್ ಆಗಿದೆ .

**ಮುಂದುವರೆದ ಪಾಟೀಸವಾಲೀಗಾಗಿ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು